SC 26/23
PW.10

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2023** **ಅ.ಸಾ.10**

**ಚಾ.ಸಾ.21**

| | | |
|---|---|---|
| ಸಾಕ್ಷಿದಾರರ ಹೆಸರು | - | ಶಿವಾನಂದ |
| ತಂದೆಯ ಹೆಸರು | - | ಅಣ್ಣಪ್ಪ ಪೂಜಾರಿ |
| ವಯಸ್ಸು | - | 38 ವರ್ಷ |
| ಉದ್ಯೋಗ | - | ಪೋಲಿಸ್ ಪೇದೆ |
| ವಿಳಾಸ | - | ಉಪಾಧೀಕ್ಷಕರ ಕಚೇರಿ, ಕಾರ್ಕಳ |

ದಿನಾಂಕಃ 06-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು 2020 ನೇ ಇಸವಿಯಿಂದ 2022 ರವರೆಗೆ ಡಿ ಸಿ ಐ ಬಿ ಕಚೇರಿ ಉಡುಪಿ ಇಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 13-02-2020 ರಂದು ಈ ಪ್ರಕರಣದ ತನಿಖಾಧಿಕಾರಿ ನನ್ನನ್ನು ಹಾಗೂ ಇತರ ಸಿಬ್ಬಂದಿಗಳಾದ ಚಾಸಾ16 ರಿಂದ 20 ರವರನ್ನು ಆರೋಪಿತರ ಪತ್ತೆಗಾಗಿ ನೇಮಿಸಿದ್ದು ಆರೋಪಿತರ ಮೊಬೈಲ್ ಲೊಕೇಶನ್ ಪರಿಶೀಲಿಸಿದಾಗ ಬೆಳಗಾವಿ ಕಡೆಗೆ ಹೋಗಿರುವುದು ತಿಳಿದು ಬಂದಿದ್ದು ಆರೋಪಿತರ ಭಾವ ಚಿತ್ರವನ್ನು ಹಾಗೂ ಚಹರೆ, ವಿಳಾಸವನ್ನು ಪಡೆದುಕೊಂಡು ಖಾಸಗಿ ವಾಹನದಲ್ಲಿ ಅದೇ ದಿನ ಹೊರಟು ಮರುದಿನ ಗೋಕಾಕ್ ಮತ್ತು ಘಟಪ್ರಭಾ ಕಡೆಗಳಲ್ಲಿನ ಬಸ್ಸು ನಿಲ್ದಾಣ, ರೈಲ್ವೆ ನಿಲ್ದಾಣ ಸಂಚರಿಸಿ ಆರೋಪಿತರ ಪತ್ತೆಯ ಬಗ್ಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ. ಆರೋಪಿತರ ಮೊಬೈಲ್ ಪೋನ್ ಗಳು ಸ್ವಿಚ್ ಆನ್ ಮತ್ತು ಸ್ವಿಚ್ ಆಫ್ ಆಗುತ್ತಿದ್ದು ನಿರ್ಧಿಷ್ಟ ಸ್ಥಳದ ಮಾಹಿತಿ ದೊರೆಯದೇ ಇದ್ದ ಹಿನ್ನೆಲೆಯಲ್ಲಿ

ಗೋಕಾಕ್ ನಲ್ಲಿ ಉಳಿದುಕೊಂಡು ಮರುದಿನ ದಿನಾಂಕ 15-02-2020 ರಂದು ಗೋಕಾಕ್ ಕಡೆ ಸಂಚರಿಸಿದಾಗ ಅವರ ಮಾಹಿತಿ ಲಭ್ಯವಾಗಿರುವುದಿಲ್ಲ. ದಿನಾಂಕ 16-02-2020 ಮತ್ತು 17-02-2020 ರಂದು ಸಹಾ ಮಾಹಿತಿ ದೊರೆತಿರುವುದಿಲ್ಲ. ದಿನಾಂಕ 18-02-2020 ರಂದು ಬೆಳಿಗ್ಗೆ 8-00 ಗಂಟೆಗೆ ನಾವು ಹುಬ್ಬಳ್ಳಿ ಕೆ ಎಸ್ ಆರ್ ಟಿ ಸಿ ಬಸ್ಸು ನಿಲ್ದಾಣಕ್ಕೆ ಬಂದಾಗ ಇಬ್ಬರು ವ್ಯಕ್ತಿಗಳು ಅನುಮಾನಾಸ್ಪದವಾಗಿ ಇರುವುದನ್ನು ಕಂಡು ನಮ್ಮಲ್ಲಿರುವ ಛಾಯಾ ಚಿತ್ರವನ್ನು ನೋಡಿದಾಗ ಅವರ ಹೋಲಿಕೆಯಾಗುತ್ತಿದ್ದು ಕೂಡಲೇ ಆರೋಪಿತರನ್ನು ವಶಕ್ಕೆ ತೆಗೆದುಕೊಂಡು ವಿಚಾರಿಸಿದಾಗ ಅವರ ಹೆಸರು ಅಶೋಕ ಹಾಗೂ ಆನಂದ ಎಂದು ತಿಳಿಸಿದ್ದು ಈ ಕೃತ್ಯದ ಬಗ್ಗೆ ಒಪ್ಪಿಕೊಂಡಿದ್ದು ಅವರನ್ನು ವಶಕ್ಕೆ ಪಡೆದುಕೊಂಡು ಹುಬ್ಬಳ್ಳಿಯಿಂದ ಹೊರಟು ಅದೇ ದಿನ ರಾತ್ರಿ 7-00 ಗಂಟೆಗೆ ವೃತ್ತ ನಿರೀಕ್ಷಕರ ಸಮಕ್ಷಮ ಹಾಜರಾಗಿ ಒಂದು ವರದಿಯೊಂದಿಗೆ ಆರೋಪಿಯುನ್ನು ಹಾಜರು ಪಡಿಸಿರುತ್ತೇವೆ. ಸದ್ರಿ ವರದಿಗೆ ಚಾಸಾ16 ಇವರು ಸಹಿ ಮಾಡಿರುತ್ತಾರೆ. ಸದ್ರಿ ವರದಿಯನ್ನು ಈಗ ನೋಡುತ್ತಿದ್ದು ನಿಪಿ-31 ಎಂದು ಗುರುತಿಸಲಾಯಿತು. ಮೂಲ ವರದಿ ಎಸ್ ಸಿ. ನಂ. 1/2021 ರಲ್ಲಿ ಗುರುತಿಸಲಾಗಿದೆ. ನಂತರ ತನಿಖಾಧಿಕಾರಿ ನಮ್ಮ ಸಮಕ್ಷಮ ಆರೋಪಿತರನ್ನು ವಿಚಾರಣೆ ಮಾಡಿ, ಅಂಗಜಪ್ತಿ ಮಾಡಿ ಅವರ ಬಳಿ ಇದ್ದ ಎರಡು ಮೊಬೈಲ್ ಫೋನ್ ಗಳನ್ನು ಅಮಾನತ್ತುಪಡಿಸಿಕೊಂಡು ದಸ್ತಗಿರಿ ಮಹಜರು ತಯಾರಿಸಿರುತ್ತಾರೆ. ಮಹಜರನ್ನು ಈಗಾಗಲೇ ನಿಪಿ.16 ಎಂದು ಗುರುತಿಸ ಲಾಗಿದ್ದು ಅದರ ಮೂಾಲ ಮಹಜರನ್ನು ನಿಪಿ-16 ಎಂದು ಎಎಸ್.ಸಿ. ನಂ.1/2021 ರಲ್ಲಿ ಗುರುತಿಸಲಾಗಿದೆ. ಮೊಬೈಲ್ ಫೋನ್ ಗಳನ್ನು ಈಗಾಗಲೇ ಮುದ್ದೆಮಾಲು-5 ಮತ್ತು 6 ಎಂದು ಗುರುತಿಸಲಾಗಿದೆ. ಆರೋಪಿಯನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ನೋಡುತ್ತಿದ್ದು ಆತನೇ ಈ ಪ್ರಕರಣದ ಆರೋಪಿ ಎಂದು ಗುರುತಿಸಿರುತ್ತಾರೆ.

**ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಆರ್.ಪಿ. ವಕೀಲರಿಂದಃ**

ಪೋಲಿಸ್ ಸಿಬ್ಬಂದಿಗಳು ಮಾತ್ರ ಆರೋಪಿಯ ತಲಾಶೆಗಾಗಿ ಹೋಗಿರುತ್ತೇವೆ. ಒಟ್ಟು ಐದು ದಿನ ಆರೋಪಿತರ ಹುಡುಕಾಟದಲ್ಲಿ ಇದ್ದೆವು. ನಾನು ಆರೋಪಿತರನ್ನು ವಿಚಾರಣೆ ಮಾಡಿರುವುದಿಲ್ಲ. ಬಸ್ಸು ನಿಲ್ದಾಣ ಸಾರ್ವಜನಿಕ ಸ್ಥಳವಾಗಿದ್ದು ಸಾಕಷ್ಟು ಜನ ಸಂಚಾರ ಇತ್ತು. ಬಸ್ಸು ನಿಲ್ದಾಣದಲ್ಲಿ ಎ.ಎಸ್.ಐ. ರವರು ದಾಖಲಾತಿಗಳನ್ನು ಮಾಡಿದ್ದಾರೆ. ಸ್ಥಳೀಯರು ಎಷ್ಟು ಜನ ಸಹಿ ಹಾಕಿದ್ದಾರೆ ಎಂದು ನೆನಪಿಲ್ಲ. ಬೆಳಿಗ್ಗೆ ಸುಮಾರು 9-00 ಗಂಟೆಗೆ ಹುಬ್ಬಳ್ಳಿ ಬಸ್ಸು ನಿಲ್ದಾಣವನ್ನು ಬಿಟ್ಟಿರುತ್ತೇವೆ. ಸಂಜೆ 7-00 ಗಂಟೆಗೆ ಉಡುಪಿ ತಲುಪಿರುತ್ತೇವೆ. ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಪೋಲಿಸರನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಸುಮಾರು ಹತ್ತು ನಿಮಿಷ ಕಚೇರಿಯಲ್ಲಿ ಇದ್ದೆವು. ನಾನು ಆರೋಪಿಯ ಪತ್ತೆ ಕಾರ್ಯದಲ್ಲಿ ಬಾಗಿಯಾದದ್ದೇ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಮೊಬೈಲ್ ಪೋನ್ ಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ನಾವು ಒಂದೇ ಖಾಸಗಿ ವಾಹನದಲ್ಲಿ ಹೋಗಿದ್ದೆವು. ಅದು ಬಾಡಿಗೆ ವಾಹನ. ಅದಕ್ಕೆ ಎಷ್ಟು ಬಾಡಿಗೆ ಮತ್ತು ಬಾಡಿಗೆಯನ್ನು ಯಾರು ಕೊಟ್ಟಿದ್ದಾರೆ ಗೊತ್ತಿಲ್ಲ. ವಾಹನಕ್ಕೆ ಪೋಲಿಸರು ಚಾಲಕ ರಾಗಿದ್ದರು, ಅವರ ಹೆಸರು ಹೇಳಲು ಆಗುವುದಿಲ್ಲ. ನಾವು ಗೋಕಾಕ್-ಘಟಪ್ರಭಾ-ಹುಬ್ಬಳ್ಳಿ ಕಡೆ ಹೋಗಿದ್ದೆವು. ನಾವು ಸ್ಥಳೀಯ ಪೋಲಿಸ್ ಠಾಣೆಗಳಿಗೆ ಹೋಗಿಲ್ಲ. ಆರೋಪಿತರ ಭಾವಚಿತ್ರಗಳನ್ನು ನಮಗೆ ಚಾಸಾ.8 ರವರು ನೀಡಿರುತ್ತಾರೆ. ಅವರು ನಮ್ಮ ಜೊತೆ ಬಂದಿರಲಿಲ್ಲ. ಆರೋಪಿತರ ಪೂರ್ವ ಪರಿಚಯ ನಮಗೆ ಇರಲಿಲ್ಲ. ಆರೋಪಿತರನ್ನು ಹುಬ್ಬಳ್ಳಿಯಲ್ಲಿ ವಶಕ್ಕೆ ಪಡೆದಿರುತ್ತೇವೆ. ಹುಬ್ಬಳ್ಳಿಯಿಂದ ಉಡುಪಿಗೆ ಸುಮಾರು 300 ಕಿ.ಮೀ. ಆಗುತ್ತದೆ. ಆರೋಪಿತರನ್ನು ವಶಕ್ಕೆ ಪಡೆದುಕೊಂಡ ಬಗ್ಗೆ ಸ್ಥಳೀಯ ಪೋಲಿಸರಿಗೆ ತಿಳಿಸಿಲ್ಲ. ಆರೋಪಿಯನ್ನು ಹುಬ್ಬಳ್ಳಿಯಲ್ಲಿ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-31 ರಲ್ಲಿ ನನ್ನ ಸಹಿ ಇರುವುದಿಲ್ಲ. ಅದಕ್ಕೆ ಚಾಸಾ.16 ರವರು ಸಹಿ ಮಾಡಿದ್ದಾರೆ.

ನಿಪಿ-16 ಮತ್ತು ನಿಪಿ-31 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿಯನ್ನು ದಸ್ತಗಿರಿ ಮಾಡಿ ಯಾವುದೇ ಮುದ್ದೆಮಾಲನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಸೂಚನೆ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಪತ್ತೆ ಕಾರ್ಯ ಮತ್ತು ದಸ್ತಗಿರಿ ಕಾರ್ಯದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.